ಓ ಎಸ್ ನಂ. 55/2018 ಡಿ.ಡಬ್ಲ್ಯೂ 1

ಸಾಕ್ಷಿಯ ಹೆಸರುಃ ಸಿ.ಎಸ್. ರವಿ

ದಿನಾಂಕಃ **04-03-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಸಿ.ಡಿ.ಎಂ. ವಕೀಲರಿಂದಃ**

8) ದಿನಾಂಕಃ25.01.2012 ರಂದು ನಾನು ಮಹೇಶ್ ಬಿನ್ ಎಂ.ಜೆ.ಮಹದೇವ್ ರವರಿಂದ ಕೆ.ಆರ್.ನಗರ ಟೌನ್ ಬನ್ನಿಮಂಟಪ ಲೇ ಔಟ್ ನಿವೇಶನ

ಸಂಖ್ಯೆಃ16 ನ್ನು ಕ್ರಯಕ್ಕೆ ಕೊಂಡ ಬಗ್ಗೆ ಕ್ರಯಪತ್ರದ ಆನ್‌ಲೈನ್ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-16 ಎಂದು ರುಜುವಾತಿಗೆ ಒಳಪಟ್ಟು ಗುರುತಿಸಲಾಯಿತು. ಸದರಿ ದಾಖಲೆಯ ಮೂಲ ಪ್ರತಿಯನ್ನು ಕೆ.ಆರ್.ನಗರದಲ್ಲಿನ ಕರ್ನಾಟಕ ಬ್ಯಾಂಕ್‌ನಲ್ಲಿ ಅಡಮಾನವಾಗಿಟ್ಟು ಸಾಲ ಪಡೆದಿರುತ್ತೇನೆ.

9) ಈ ನಿವೇಶನದಲ್ಲಿ ಮನೆ ಕಟ್ಟಲು ಬಿಲ್ಡಿಂಗ್ ಲೈಸೆನ್ಸ್ ಮತ್ತು ಅನುಮೋದಿತ ನಕ್ಷೆಯನ್ನು ಪಡೆದಿದ್ದು, ಅವುಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಡಿ-17 ಮತ್ತು 18 ಎಂದು ಗುರುತಿಸಲಾಯಿತು.

ಆದ್ದರಿಂದ ವಾದಿಯ ದಾವೆಯನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎಸ್.ವಿ. ವಕೀಲರಿಂದಃ**

ವಾದಿ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.